Rotary 2025-26

ಮಿಡ್‌ಟೌನ್ ನ್ಯೂಸ್

# Midtown News

R.I. DISTRICT 3182 Zone-10 Club No. 21853 Charter Date : 16-05-1984

In House Bulletin of Rotary Club Shimoga Mid Town

R.I. President : Rtn. Francesco Arezzo
Dist. Governor : Rtn. Palaksha K.
Asst. Governor : Rtn. K.P. Shetty

President : Rtn. Harsha Kamath
Secretary : Rtn. Manjunath R.N.

Director : Rtn. Anil P. Shetty
Editor : Rtn. Anand I.R.
Co-Chairmen : Rtn. Narendra K.V.
Members : Rtn. Sreenag, Rtn. Raghupathi S., Rtn. K.V.L. Raju

*We meet on 2nd, 3rd and 4th Thursday at Rotary Mid Town Hall, SHIVAMOGGA-577201* rotaryshimogamidtown@gmail.com

**Vol. 42** **18 - 12 - 2025** **ISSUE 17**

## Disease Prevention and Treatment Month

### ದಿನಾಂಕ 11-12-2025ರ ವಾರದ ಸಭೆಯ ವರದಿ

ದಿನಾಂಕ 11-12-2025ರ ವಾರದ ಸಭೆಯು ಉಪನ್ಯಾಸಕರ ಸಭೆಯಾಗಿತ್ತು. ಅಂದು ಅತಿಥಿ ಉಪನ್ಯಾಸಕರಾಗಿ ಶ್ರೀಮತಿ ಕಿರಣ್‌ದೇಸಾಯಿ ಇವರು ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷ ರೊ. ಹರ್ಷ ಬಿ.




ಕಾಮತ್ ಇವರು ವಹಿಸಿದ್ದರು ಹಾಗೂ ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ ಸದಸ್ಯರನ್ನು ಆಹ್ವಾನಿಸಿದರು. ಮೊದಲಿಗೆ ರೊ. ಪವಿತ್ರ ಕಾಮತ್‌ರವರು ರೋಟರಿ ಮಾಹಿತಿಯನ್ನು ವಾಚಿಸಿದರು.

ಅಧ್ಯಕ್ಷರು ತಮ್ಮ ಪ್ರಕಟಣೆಯಲ್ಲಿ ದಿನಾಂಕ 11-12-2025ರಂದು ನಡೆಯಬೇಕಿದ್ದ ವಾರ್ಷಿಕ ಸರ್ವಸದಸ್ಯರ ಸಭೆಯನ್ನು, ನಿಯೋಜಿತ 2026-27ರ ಅಧ್ಯಕ್ಷರಾದ ರೊ. ಡಾ|| ಶ್ರೀಧರ್ ಎಸ್. ಇವರ ಕೊರಿಕೆಯ ಮೇರೆಗೆ ದಿನಾಂಕ 18-12-2025 ರಂದು ನಡೆಸಲು ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಲಾಯಿತು.



ನ್ಯೂ ಜನರೇಷನ್ ನಿರ್ದೇಶಕರಾದ ರೊ. ಶಿಲ್ಪಾ ಹೆಚ್.ಜಿ. ಅವರು ಇಂದಿನ ಅತಿಥಿ ಉಪನ್ಯಾಸಕರಾದ ಶ್ರೀಮತಿ ಕಿರಣ್ ದೇಸಾಯಿ ಇವರ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು.

ಕಿರಣ್ ದೇಸಾಯಿ ಅವರು ಶಿವಮೊಗ್ಗದ ಪ್ರಸಿದ್ಧ ಕಮಲಾ ನೆಹರು ಮಹಿಳಾ ಕಾಲೇಜಿನಲ್ಲಿ ಕನ್ನಡ ವಿಭಾಗ ಮುಖ್ಯಸ್ತರಾಗಿ ಸೇವೆ ಸಲ್ಲಿಸಿದ್ದರು. ಇವರು ಹಲವಾರು ಸಂಘ ಸಂಸ್ಥೆಗಳಲ್ಲಿ ನಿರ್ದೇಶಕರು ಹಾಗೂ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಸಮಾಜ ಮುಖಿ ಸೇವೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ.



ಅವರು ತಮ್ಮ ಉಪನ್ಯಾಸದ ಸಂದರ್ಭದಲ್ಲಿ ಕವಿ ಬೇಂದ್ರೆಯವರ “**ಹುಸಿ ನಗುತ ಬಂದೇವ, ನಸು ನಗುತ ಬಾಳೋಣ, ತುಸು ನಗುತ ತೆರಳೋಣ, ಬಡ ನೂರು ವರ್ಷಾನ, ಹರುಷಾದಿ ಕಳೆಯೋಣ, ಯಾಕಾರ ಕೆರಳೋಣ**”ಎಂಬ ಅದ್ಭುತ ಸಾಲುಗಳನ್ನು ಉಲ್ಲೇಖಿಸಿ ನಗುವಿನ ಮಹತ್ವವನ್ನು ವಿವರಿಸಿದರು.

ನಗು ಎನ್ನುವುದು ಒಂದು ಯೋಗ, ಅದು ಆಧ್ಯಾತ್ಮಿಕ ಕ್ರಿಯೆಯಾಗಿದೆ. ನಗುವುದು ಸಹಜ ಧರ್ಮ, ನಗಿಸುವುದು ಪರ ಧರ್ಮ. ನಕ್ಕು ನಗಿಸುವುದೇ ಶ್ರೇಷ್ಟ ಧರ್ಮ ಎಂದು ವಿವರಿಸುತ್ತಾ ಎಲ್ಲರ ಮನ ಗೆದ್ದರು.

ಉಪನ್ಯಾಸದ ನಂತರ ಅವರನ್ನು ರೋಟರಿ ಕ್ಲಬ್ ಮಿಡ್‌ಟೌನ್ ಪರವಾಗಿ ಸನ್ಮಾನಿಸಲಾಯಿತು.




ಇಂದಿನ ಸಭೆಯ ಹಾಜರಾತಿ ಬಹುಮಾನಕ್ಕೆ ರೊ. ರವೀಂದ್ರ ಕೆ. ಮತ್ತು ರೊ. ಪ್ರೀತಿ ದೀಪಕ್‌ರವರು ಭಾಜನರಾದರು. ಕೊನೆಯಲ್ಲಿ ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್ ಇವರು ಎಲ್ಲರನ್ನು ವಂದಿಸಿದರು.



## ವಾರದ ಸಭೆ

ದಿನಾಂಕ : **18-12-2025, ಗುರುವಾರ**

ಸಮಯ : **ಸಂಜೆ 7.30ಕ್ಕೆ**

ವಿಷಯ : **ವಾರ್ಷಿಕ ಸರ್ವಸದಸ್ಯರ ಸಭೆ**

### 4 WAY TEST

**of the things we think, say or do :**

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS**?
4. Will it be **BENEFICIAL** to all concerned?







ದಿನಾಂಕ 12-12-2025ರಂದು ಶಿವಮೊಗ್ಗದ ಬಂಟರ ಭವನ, ಗೋಪಾಳ ಗೌಡ ಬಡಾವಣೆಯಲ್ಲಿ ದೇಶಿಯ ಇವೆಂಟ್ಸ್ ವತಿಯಿಂದ ರೋಟರಿ ಮಿಡ್‌ಟೌನ್ ಸಹಕಾರದೊಂದಿಗೆ ದೇಶಿಯ ಪರಂಪರೆಯ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮೇಳ ಭವ್ಯವಾಗಿ ಆರಂಭ ಗೊಂಡಿತು. ಮೇಳವನ್ನು ರೋಟರಿ ಕ್ಲಬ್ ಶಿವಮೊಗ್ಗ ಮಿಡ್‌ಟೌನ್ ಪಬ್ಲಿಕ್ ಇಮೇಜ್ ನಿರ್ದೇಶಕರಾದ ರೊ. ಮೇನಕಾ ಜಗದೀಶ್ ಹಾಗೂ ಆ್ಯನ್ಸ್ ಕ್ಲಬ್ ಅಧ್ಯಕ್ಷರಾದ ರೊ. ಪವಿತ್ರ ಕಾಮತ್ ಮತ್ತು ಅಧ್ಯಕ್ಷರಾದ ರೊ. ಹರ್ಷ ಬಿ. ಕಾಮತ್‌ರವರು ಉದ್ಘಾಟಿಸಿದರು. ಉದ್ಘಾಟನೆಯಲ್ಲಿ ಮಾತನಾಡಿದ ಅಧ್ಯಕ್ಷರು ಸ್ವದೇಶಿ ವಸ್ತುಗಳು ಹಾಗೂ ಗುಡಿ ಕೈಗಾರಿಕೆಗಳ ಉತ್ತೇಜನ ಸ್ಥಳೀಯರಿಗೆ ಆರ್ಥಿಕ ಬಲಕೊಡುತ್ತದೆ. ಸ್ಥಳೀಯ ಉತ್ಪನ್ನಗಳು ಬಲವಾದಾಗ ದೇಶವು ವಿಶ್ವಗುರುವಾಗುವ ದಾರಿಯನ್ನು ಕಾಣುತ್ತದೆ. ಈ ಮೇಳದಲ್ಲಿ ಗೋವು ಉತ್ಪನ್ನಗಳು, ಹ್ಯಾಂಡ್‌ಮೇಡ್ ಸೋಪುಗಳು, ನೈಸರ್ಗಿಕ ಆಹಾರ ಸಾಮಗ್ರಿಗಳು, ಹಸ್ತಕಲೆ, ಹ್ಯಾಂಡ್‌ಮೇಡ್ ಜ್ಯೂವೆಲರಿ, ಅಲಂಕಾರ ವಸ್ತುಗಳು, ಸೋಲಾರ್ ಉತ್ಪನ್ನಗಳು ಸೇರಿದಂತೆ ಅನೇಕ ದೇಶೀಯ ಉತ್ಪನ್ನಗಳು ಮಾರಾಟಕ್ಕಿದ್ದವು. ಕಾರ್ಯಕ್ರಮದಲ್ಲಿ ಆಯೋಜಕರಾದ ಜಯವರ್ಧನ್, ದಿಲೀಪ್ ಕುಮಾರ್, ಅರವಿಂದ್ ಉಪಸ್ಥಿತರಿದ್ದರು.

**Donate Blood and Save Lives**

## ROTARY INFORMATION

### To health and happiness




**Rtn. Pavithra Kamath**

This month's special issue of Antury maga zme is all about happiness, that most ele mental of human yearnings. More than a Feeling, though, this state of positive well-being. and the conditions necessary to create and sustain it, should be considered a universal right.

December also marks Rotary's Disease Preven tion and Treatment Month, when we highlight our members work to promote health and wellness, including mental wellness. Globally, nearly I in 7 people have a mental health disorder, according to a recent World Health Organisation report. Yet only 9 per cent of people with depression receive adequate treatment.

We are fortunate in Rotary to have a power fal way to support emotional well-being and hap piness: friendship. The connections we build in Rotary can be a powerful force for change. I know this from personal experience.

**Francesco Arezzo**
President, Rotary International






**ROTARIAN BIRTHDAY** *Greetings to*

| | |
|---|---|
| Rtn. Pema Anand | Dec-11 |
| Rtn. Shilpa H.G. | Dec-12 |
| Rtn. Raveendra Bennehalli | Dec-16 |
| Rtn. H.N.S. Rao | Dec-17 |
| Rtn. Suresh Kumar D. | Dec-18 |



**MARRIAGE ANNIVERSARY** *Greetings to*

| | |
|---|---|
| Rtn. Manjappa Aakere<br>Ann. Neelambika | Dec-14 |
| Rtn. Dr. Akshatha Okade<br>Spouse Dr. Anoop | Dec-14 |
| Rtn. Sadananda Swamy | Dec-16 |
| Rtn. Prakash D.V.<br>Ann. Sujatha | Dec-18 |



**ANN BIRTHDAY** *Greetings to*

| | |
|---|---|
| Ann. Samya Sulthaana | Dec-15 |
| Ann. Archana Raju | Dec-18 |